ಕರ್ನಾಟಕ ವಿಧಾನಸಭೆ

598 ಶ್ರೀ ಶ್ರೀನಿವಾಸ್ .ಎಸ್.ಆರ್.

ಸಿ.ಎಂ ಉದಾಸಿ ಲೋಕೋಪಯೋಗಿ ಸಚಿವರು.

ಅ) ತುಮಕೂರು ಜಿಲ್ಲೆ, ಗುಬ್ಬಿ ಕ್ಷೇತ್ರದ ಶಿರಾ–ನೆಲ್ಲಿಗೆರೆ ರಸ್ತೆ ಶಿಥಿಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಶಿರಾ–ನೆಲ್ಲಿಗೆರೆ ರಸ್ತೆ ದುರಸ್ತಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;

ಇ) ಶಿರಾ–ನೆಲ್ಲಿಗೆರೆ ರಸ್ತೆ ದುರಸ್ತಿಗಾಗಿ ಸರ್ಕಾರ ಅನುದಾನ ನಿಗದಿಪಡಿಸಿದೆಯೇ;

ಈ) ಹಾಗಿದ್ದಲ್ಲಿ, ನಿಗದಿಪಡಿಸಿರುವ ಅನುದಾನದ ಮೊತ್ತವೆಷ್ಟು;

ಉ) ಶಿರಾ–ನೆಲ್ಲಿಗೆರೆ ರಸ್ತೆಯ ದುರಸ್ತಿ ಕಾಮಗಾರಿಯನ್ನು ಎಂದಿನಿಂದ ಕೈಗೆತ್ತಿಕೊಳ್ಳಲಾಗುವುದು?

ಸಿರಾ–ನೆಲ್ಲಿಗೆರೆ ರಸ್ತೆಯ ಗುಬ್ಬಿ ತಾಲ್ಲೂಕಿನಲ್ಲಿ ಸರಪಳಿ ಕಿ.ಮೀ 9.00ರಿಂದ 59.80ರವರೆಗೆ ಹಾದು ಹೋಗುತ್ತಿದ್ದು, ಕೆಲವು ಭಾಗಗಳು ಶಿಥಿಲಗೊಂಡಿದ್ದು, ಇದರಲ್ಲಿ ಕಿ.ಮೀ 36.00ರಿಂದ 59.80 ರವರೆಗಿನ ಒಟ್ಟಾರೆ 23.80 ಕಿ.ಮೀ ಸಿರಾ–ನಂಜನಗೂಡು ರಾಜ್ಯ ಹೆದ್ದಾರಿ–84ರ ಭಾಗವಾಗಿರುತ್ತದೆ. ಈ ರಸ್ತೆಯ ಅಭಿವೃದ್ಧಿ/ದುರಸ್ತಿಗಾಗಿ ಪ್ರಸಕ್ತ 2009–10ನೇ ಸಾಲಿನಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ:–

1) ಸಿರಾ–ನಂಜನಗೂಡು ರಾಜ್ಯ ಹೆದ್ದಾರಿ–84ರ 4.00 ಕಿ.ಮೀ ಅಭಿವೃದ್ಧಿಗಾಗಿ ಕೇಂದ್ರ ರಸ್ತೆ ನಿಧಿ ಯೋಜನೆ ಅಡಿಯಲ್ಲಿ ರೂ.200.00 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಈ ಕಾಮಗಾರಿಯನ್ನು ರಾಷ್ಟ್ರೀಯ ಹೆದ್ದಾರಿ ವಲಯದಿಂದ ಕೈಗೊಳ್ಳಲಾಗುತ್ತಿದೆ. ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿದ್ದು, ಸಧ್ಯದಲ್ಲಿಯೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.
2) ರಾಜ್ಯ ಹೆದ್ದಾರಿ ದುರಸ್ತಿಯನ್ನು ಪೂರ್ವ ಮುಂಗಾರು ನಿರ್ವಹಣೆ ಕಾಮಗಾರಿ ಯೋಜನೆ ಅಡಿಯಲ್ಲಿ ರೂ.10.27 ಲಕ್ಷಗಳ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿದೆ.
3) ಜಿಲ್ಲಾ ಮುಖ್ಯ ರಸ್ತೆಗಳ ತುರ್ತು ದುರಸ್ತಿಯನ್ನು ಪೂರ್ವ ಮುಂಗಾರು ನಿರ್ವಹಣಾ ಕಾಮಗಾರಿ ಯೋಜನೆ ಅಡಿಯಲ್ಲಿ ರೂ.2.70 ಲಕ್ಷಗಳ ಅನುದಾನದಲ್ಲಿ ಕೈಗೆತ್ತಿಕೊಳ್ಳಲಾಗಿದೆ.